ಮಹೇಶ್ ಎಸ್.ಹೆಚ್. ಕೊಟ್ಟೂರು

*ಮನುಷ್ಯ ಸತ್ತ ನಂತರ ಆತನ ಜೀವ ಎಲ್ಲಿಗೆ ಹೋಗುತ್ತದೆ?*



ಹುಚ್ಚಪ್ಪ! ಬಂಧುಗಳು, ಸ್ನೇಹಿತರು, ವೈದ್ಯರು, ತೆರಿಗೆಗಳು ಜೀವ ತಿಂದ ಮೇಲೆ ಹೋಗಲು ಏನೇನೂ ಉಳಿದಿರುವುದಿಲ್ಲ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಪ್ರೀತಿ ಏಕೆ ಜಗಳದಲ್ಲೇ ಪ್ರಾರಂಭವಾಗತ್ತೆ?*

ಹಾಗೇನಿಲ್ಲ. ನೀವು ಬಸಿರಿನಲ್ಲಿದ್ದಾಗಲೇ ನಿಮ್ಮಮ್ಮ ನಿಮ್ಮನ್ನು ಪ್ರೀತಿಸಿದ್ದಳು.

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್

*ಹುಡುಗಿಯರ ಕಾಲಿನಲ್ಲಿ ಚಪ್ಪಲಿ ಇಲ್ಲದಾಗ ಪ್ರೊಪೋಸ್ ಮಾಡಬೇಕಾ?*

ಪೆಪ್ಪರ್ ಸ್ಪ್ರೇ ಇದ್ದೀತು, ಎಚ್ಚರ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಹೆಣ್ಣು ಕೊಟ್ಟ ಮಾವ ಕಣ್ಣು ಕೊಟ್ಟ ದೇವರು ಅನ್ನುತ್ತಾರೆ. ಹೆಣ್ಣು ಕೊಟ್ಟ ಅತ್ತೆ?*

ಸೌಟು ಕೊಟ್ಟ ದೈವ!

ಮಲ್ಲನಗೌಡ ಸಿ. ಪಾಟೀಲ, ರಂಭಾಪುರ

*ಸರ್ವನಾಶವಾಗುವ ಪ್ರಪಂಚದಲ್ಲಿ ಕೊನೆಯವರೆಗೂ ಉಳಿಯುವುದು ಯಾವುದು?*



ಎಂತಹ ಗಂಡುಬೀರಿಗೂ ಹೆದರದೆ ಮೀಸೆ ಕುಣಿಸುವ ಜಿರಳೆ.

ಆರ್. ಮಧುಸೂದನ್, ಹಾಸನ

*ಇಲ್ಲೊಬ್ಬರು ತಮ್ಮ ದೇಹವನ್ನು ವಿದ್ಯುತ್ ಚಿತಾಗಾರದಲ್ಲಿ ಸುಡಬಾರದೆಂದು ಹೇಳಿ ಹೋಗಿದ್ದೇಕೆ?*

ಮಧ್ಯದಲ್ಲಿ ಕರೆಂಟ್ ಕೈಕೊಟ್ಟು ಸಂಸ್ಕಾರ ಮಾಡುವವರಿಗೆ ಊಟಕ್ಕೆ ತಡವಾಗದಿರಲೆಂದು.

ಕೆ.ಎಂ. ಲಿಂಗರಾಜು, ನಂಜನಗೂಡು

*ಎನ್.ಹೆಚ್. ಎಂದರೆ ನರಕದ ಹಾದಿಗಳು ಅಂತಾರಲ್ಲಾ...?*

ಎನ್ – ನೈಂಟಿ ಹೆಚ್ – ಹಾಕಿರುವವರು ಡ್ರೈವ್ ಮಾಡಿದಾಗ ಮಾತ್ರವಂತೆ.

ರಮೇಶ್, ಹನುಮನಾಳು

*ವಾಹನದ ತುಂಬ ಜನರಿದ್ದರೂ ಡ್ರೈವರ್ 'ನನ್ನವರು ಯಾರೂ ಇಲ್ಲ' ಎಂಬ ಗೀತೆಯನ್ನು ಹಾಕಿರುವುದೇಕೆ?*

ಅದು 'ಎಲ್ಲಾ ಹೊಸಬರೇ; ಸರಿಯಾಗಿ ಕಮಾಯಿ ಮಾಡಿಕೋ' ಎಂದು ಸಮಪಾಲಿಗ ಕಂಡಕ್ಟರ್‌ಗೆ ಕೊಡುವ ಸೂಚನೆಯಂತೆ!

ನವಿರವಿ, ಬಾಳೆಹೊನ್ನೂರು

*ಅಸುರರಿಗೂ, ಅರಸರಿಗೂ ಇರುವ ವ್ಯತ್ಯಾಸ?*

ಅಸುರರಿಗೆ ವರ ಎಂದರೆ ವ್ಯಾಮೋಹ; ಅರಸರಿಗೆ ವಧು!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ

*ಬದುಕು ಬಂಗಾರವಾಗಬೇಕಾದರೆ ಇರಬೇಕಾದ ಗುರಿ ಏನು?*

ಹೃದಯ ಕಲ್ಲಾಗಬಾರದು, ಕಿವಿ ಹಿತ್ತಾಳೆಯಾಗಬಾರದು ಎನ್ನುವುದು.

ಅಣಜಿ ಮಂಜುನಾಥ್, ಮಾಧನಬಾವಿ

*ಕಿಂಗ್ ಗ್ರೇಟೋ, ಕಿಂಗ್ ಮೇಕರ್ ಗ್ರೇಟೋ?*

ಎರಡೂ ಅಲ್ಲ, ಕಿಂಗ್ ಫಿಷರ್ ಗ್ರೇಟು ಎಂದನಾ 'ಅಮಲುದಾರ'.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಎಲ್ಲಾ ದೇವರುಗಳಿಗೂ ದೇವಾಲಯಗಳಿರುವಂತೆ ಯಮನಿಗೆ ಏಕೆ ಇಲ್ಲ?*

ಇಡೀ ಹೆದ್ದಾರಿಯೇ ಅವನ ದೇವಾಲಯ; ದಿನಕ್ಕೆ ನೂರಾರು ನೈವೇದ್ಯಗಳು!

ಕುಮಾರ ಚಲವಾದಿ, ಹೊಳೆನರಸಿಪುರ

*ನನ್ನ ಸ್ನೇಹಿತ ತನ್ನ ಪತ್ನಿಯನ್ನು ಗೂಬೆ ಎಂದು ಬೈಯುತ್ತಾನಲ್ಲ...?*

ಅದು ಬೈಗುಳ ಅಲ್ಲವಂತೆ; ಮದುವೆಯಾದ ಮೇಲೆ ಹೆಂಡತಿಯ ಹೆಸರಿಗೆ ಲಗತ್ತಿಸಲಾದ ಗಂಡನ ಸರ್‌ನೇಮ್!

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಕೆ.ಪಿ.ಎಸ್.ಸಿ. ಎಂಬುದರ ನಿಜವಾದ ಅರ್ಥ?*

ಕರ್ನಾಟಕ ಪೊಲಿಟಿಷಿಯನ್ಸ್ ಸೆಲೆಕ್ಷನ್ ಕಮಿಷನ್!

## ಬಹುಮಾನಿತ ಪ್ರಶ್ನೆ

ಎಂ.ಜಿ. ಚನ್ನಪ್ಪಸ್ವಾಮಿ, ಅರಬಿಳಚಿ ಕ್ಯಾಂಪ್

*ಬೇಡುವುದಕ್ಕೂ, ನೀಡುವುದಕ್ಕೂ ವ್ಯತ್ಯಾಸವೇನು?*

ರಾಜಕಾರಣದ ವಿಷಯದಲ್ಲಂತೂ ಬೇಡುವುದು ಮತ, ನೀಡುವುದು ತಮ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಲವರ್‌ಗೂ, ಲಿವರ್‌ಗೂ ಏನು ವ್ಯತ್ಯಾಸ?*

ಲವರ್ ಕೈಕೊಟ್ಟರೆ ಠಂ, ಲಿವರ್ ಕೈಕೊಟ್ಟರೆ ಢಂ!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ

*ಪ್ರಥಮ ಚುಂಬನಂ ದಂತಭಗ್ನಂ; ಪ್ರಥಮ ಆಲಿಂಗನಂ?*

ದೊರೆತುದು ಆ ಬೆಡಗಿಯ ಸೋದರರ್ದುಂ; ಅಕಟಕಟಾ, ದೇಹದ ಅಸ್ಥಿಅಸ್ಥಿಯೂ ಚೂರ್ಣಚೂರ್ಣಂ!

ಜಾಕೋಬ್ ಡಿಸೋಜ, ಕುರುವಳ್ಳಿ

*ರಾಜಕೀಯಕ್ಕೆ ಸೇರಬೇಕೆಂದಿರುವೆ. ಯಾವ ಹೆಜ್ಜೆ ಮುಂದಿಡಲಿ?*



ತಪ್ಪುಹೆಜ್ಜೆ!

ವಿ. ಹಮೀದ್, ವಿಟ್ಲ

*ಅಳಿಯ ಮನೆ ತೊಳೆಯಲು ಕಾರಣವೇನಿದ್ದೀತು?*

ಗುಡಿಸಿ ಗುಂಡಾಂತರ ಮಾಡಿದ್ದು ಸ್ಪಷ್ಟವಾಗಿ ಕಾಣದಿರಲೆಂದು!

ಮಹಾಂತಯ್ಯಾ ಕೆ. ಮಠ, ಬಂದರವಾಡ

*ಅಪಾಯಕ್ಕೂ, ಉಪಾಯಕ್ಕೂ ಇರುವ ವ್ಯತ್ಯಾಸವೇನು?*

ಒಂದರಿಂದ ಪ್ರಮಾದ, ಮತ್ತೊಂದರಿಂದ ಪ್ರಮೋದ.

ಶೋಭಾ ಎಂ.ಆರ್. ಮರ್ಕುಲಿ

*ಇತಿಹಾಸ ಮತ್ತೆ ಮರುಕಳಿಸಿದರೆ ಹೇಗಿರುತ್ತದೆ ರಾಮ್‌ಜೀ?*

ಭೇಷ್! ಚರಿತ್ರೆ ಓದಿ ಅರ್ಥವಾಗದವರಿಗೆ, ನೋಡಿ ತಿಳಿದುಕೊಳ್ಳಲು, ಅನುಕೂಲವಾಗುತ್ತದೆ.

■ ರಾಮ್